## ಕರ್ನಾಟಕ ಸರ್ಕಾರದ- ನಡವಳಿಗಳು

ವಿಷಯ: ದರ್ವೇಶಿ ಜನಾಂಗಕ್ಕೆ ಧಾರ್ಮಿಕ ವಿಧಿಯಂತೆ ಧಾರ್ಮಿಕ ಭಿಕ್ಷೆ ಎತ್ತಲು ಪರವಾನಗಿ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ ಸಕಇ 40 ಎಸ್.ಬಿಆರ್ 98 ಬೆಂಗಳೂರು ದಿನಾಂಕ: 16-7-1999.
2. ಕಾರ್ಯದರ್ಶಿ, ದರ್ವೇಶ್ ವೆಲ್‌ಫೇರ್ ಅಸೋಸಿಯೇಷನ್ (ನೋಂ) ಬೆಂ-5 ಇವರ ಮನವಿ ಪತ್ರ ದಿನಾಂಕ: 24/5/2003.
3. ಕಾರ್ಯದರ್ಶಿ,ಕೇಂದ್ರ ಪರಿಹಾರ ಸಮಿತಿ ಬೆಂಗಳೂರು-ಇವರ ಪತ್ರ ಸಂಖ್ಯೆ ಕೇಂಪಸ/ಎಂಪಿಎಸ್/94-95 ದಿನಾಂಕ: 7-7-2003.

ಪ್ರಸ್ತಾವನೆ:

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ ದರ್ವೇಶಿ ಜನಾಂಗಕ್ಕೆ ಸೇರಿದ ಧಾರ್ಮಿಕ ಭಿಕ್ಷುಗಳು, ಸಂಬಂಧಿಸಿದ ತಹಶೀಲ್ದಾರರವರಿಂದ ಪ್ರಮಾಣ ಪತ್ರ ಪಡೆದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ರಚಿಸಲಾಗಿರುವ ಜಿಲಾ ಜಾತಿ ಮತ್ತುಆದಾಯ ಪರಿಶೀಲನಾ ಸಮಿತಿಯಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದು ಅರ್ಜಿ ಸಲ್ಲಿಸಿದಲ್ಲಿ, ಅವರುಗಳಿಗೆ ಧಾರ್ಮಿಕ ವಿಧಿಯಂತೆ ಧಾರ್ಮಿಕ ಭಿಕ್ಷುಗಳಿಗೆ ಭಿಕ್ಷೆ ಎತ್ತಲು ಪರವಾನಗಿಯನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ ಕಾರ್ಯದರ್ಶಿ ದರ್ವೇಶ್ ವೆಲ್‌ಫೇರ್ ಅಸೋಸಿಯೇಷನ್ (ನೋಂ) ಬೆಂಗಳೂರು-5 ಇವರು ಸರ್ಕಾರಿ ಆದೇಶ ಸಂಖ್ಯೆ ಸಕಇ 40 ಎಸ್.ಬಿ.ಆರ್ 98 ದಿನಾಂಕ: 15/7/99 ರಲ್ಲಿ ಧಾರ್ಮಿಕ ಭಿಕ್ಷುಗಳಿಗೆ ಭಿಕ್ಷೆ ಎತ್ತಲು ಪರವಾನಗಿ ನೀಡಲು ಆದೇಶಿಸಿದ್ದರೂ ಸಹ ತಹಶೀಲ್ದಾರರವರಿಂದ ಪ್ರಮಾಣ ಪತ್ರ ಹಾಗೂ ಜಿಲ್ಲಾಧಿಕಾರಿಗಳಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದು ದರ್ವೇಶಿ ಬಾಂಧವರಿಗೆ ಕೇಂದ್ರ ಪರಿಹಾರ ಸಮಿತಿಗೆ ಅರ್ಜಿ ಸಲ್ಲಿಸುವುದು ಅತ್ಯಂತ ಕಷ್ಟದಾಯಕವಾದ ಸಮಸ್ಯೆಯಾಗಿದೆಯೆಂದು ಸರ್ಕಾರಿ ಕೆಲಸಕ್ಕೆ ಸೇರಿದಂತೆ ಭಿಕ್ಷುಕರು ಪ್ರಮಾಣ ಪತ್ರಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳಿಂದ ಪಡೆಯುವುದು ದುಸ್ತರವಾಗಿದೆಯೆಂದು, ಸಾಮಾನ್ಯವಾಗಿ ಸರ್ಕಾರಿ ಕಛೇರಿಗಳಲ್ಲಿ ಭಿಕ್ಷುಕರ ಚಲನವಲನಕ್ಕೆ ನಿಷೇಧ ಅಡ್ಡಿ ಇರುವುದರಿಂದ ಅವರ ಸಂಘಟನೆಗೆ ದರ್ವೇಶರನ್ನು ಗುರುತಿಸುವ ಮತ್ತು ಸದರಿ ವ್ಯಕ್ತಿಯ ಪ್ರಮಾಣ ಪತ್ರಕ್ಕೆ ಶಿಫಾರಸ್ಸು ಮಾಡುವ ಅಧಿಕಾರ ಕೊಡಬೇಕೆಂದು ಮನವಿ ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಕಾರ್ಯದರ್ಶಿ ಕೇಂದ್ರ ಪರಿಹಾರ ಸಮಿತಿ ಇವರು ಈ ಧಾರ್ಮಿಕ ಭಿಕ್ಷುಗಳಿಗೆ ಈಗಾಗಲೇ ಪರವಾನಗಿಯನ್ನು ನೀಡಿದ್ದು, ಸರ್ಕಾರಿ ಆದೇಶ ಸಂಖ್ಯೆ ಸಕಇ 40 ಎಸ್.ಬಿ.ಆರ್ 98 ದಿನಾಂಕ 16-7-99 ರಲ್ಲಿ ಸೂಚಿಸಿರುವಂತೆ

ಸಿಂಧುತ್ವದ ಪ್ರಮಾಣ ಪತ್ರ ಪಡೆದು ಅರ್ಜಿ ಸಲ್ಲಿಸಿದ್ದಲ್ಲಿ, ಫೋಟೋ ಸಹಿತ ಗುರುತಿನ ಚೀಟಿ ಹಾಗೂ ಪರವಾನಗಿಯನ್ನು ನೀಡುವಂತೆ ಕೋರಿರುತ್ತಾರೆ. ಕಾರಣ ಈ ಆದೇಶ.

**ಸರ್ಕಾರದ ಆದೇಶ ಸಂ:ಸಕಇ 33 ಎಸ್.ಬಿ.ಆರ್ 2003 ಬೆಂ. ದಿ:09-10-2003**

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಕರ್ನಾಟಕ ಬಿಕ್ಷಾಟಿನಾ ನಿರ್ಮೂಲನಾ ಕಾಯಿದೆ 1975 ರ ಸೆಕ್ಷನ್ 2 (2) ರ ಪ್ರಕಾರ ದರ್ವೇಶ್ ಜನಾಂಗಕ್ಕೆ ಧಾರ್ಮಿಕ ವಿಧಿಯಂತೆ ಬಿಕ್ಷೆ ಎತ್ತಲು ಅನುಮೋದನೆಯನ್ನು ಈಗಾಗಲೇ ನೀಡಲಾಗಿದೆ ಈ ಧಾರ್ಮಿಕ ಬಿಕ್ಷುಗಳನ್ನು ಗುರುತಿಸುವ ಬಗ್ಗೆ ಈ ಕೆಳಕಂಡಂತೆ ಸೂಚನೆಯನ್ನು ಪಾಲಿಸಬೇಕು:-

1. ಕರ್ನಾಟಕ ಬಿಕ್ಷಾಟನೆ ನಿರ್ಮೂಲನಾ ಕಾಯಿದೆ ಸೆಕ್ಷನ್ 2 (2) ರ ಪ್ರಕಾರ ಧಾರ್ಮಿಕ ಬಿಕ್ಷುಗಳಿಗೆ ಬಿಕ್ಷಾಟನೆ ಮಾಡಲು ಯಾವುದೇ ಸಮಸ್ಯೆಗಳು ಬಾರದಂತೆ ಕೇಂದ್ರ ಪರಿಹಾರ ಸಮಿತಿಯು ನೋಡಿಕೊಳ್ಳುವುದು;

2. ಇಂತಹ ಧಾರ್ಮಿಕ ಬಿಕ್ಷುಗಳನ್ನು ಗುರುತಿಸಲು ಅವಶ್ಯಕವಾಗುವಂತೆ ಅವರುಗಳಿಗೆ ವಿಶೇಷ ಗುರುತಿನ ಚೀಟಿ (Identity card) ಗಳನ್ನು ನೀಡುವುದು. ಈ ಗುರುತಿನ ಚೀಟಿಗಳನ್ನು ಹೊಂದಿರುವವರನ್ನು ಕೇಂದ್ರ ಪರಿಹಾರ ಸಮಿತಿಯ ಸಿಬ್ಬಂದಿ ವರ್ಗದವರು/ಪೋಲಿಸರು ಬಂಧಿಸಬಾರದು;

3. ದಿನಾಂಕ 16-7-99 ರ ಸರ್ಕಾರಿ ಆದೇಶದಲ್ಲಿರುವಂತೆ ಧಾರ್ಮಿಕ ಬಿಕ್ಷುಗಳು ತಹಸೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದು, ಜಿಲ್ಲಾ ಸಮಿತಿಯಿಂದ ಸಿಂಧುತ್ವ ಪತ್ರವನ್ನು ಪಡೆಯುವ ಕ್ರಮವನ್ನು ಕೈ ಬಿಡಲಾಗಿದೆ.

4. ಧಾರ್ಮಿಕ ಬಿಕ್ಷುಗಳಿಗೆ ನೀಡಲಾಗುವ ಗುರುತಿನ ಚೀಟಿಗಳನ್ನು ಅಧಿಕೃತವಾಗಿ ಕೇಂದ್ರ ಪರಿಹಾರ ಸಮಿತಿಯಿಂದ ಅನುಮೋದನೆಯನ್ನು ಪಡೆದ ಸಂಘದ ಪದಾಧಿಕಾರಿಗಳು ದೃಢೀಕರಿಸತಕ್ಕದ್ದು. ದರ್ವೇಶ್ ಜನಾಂಗದ ಧಾರ್ಮಿಕ ಬಿಕ್ಷುಗಳಿಗೆ ಸಂಬಂಧಿಸಿದಂತೆ ಈ ಪ್ರಮಾಣ ಪತ್ರವನ್ನು ನೀಡಲು ಕಾರ್ಯದರ್ಶಿಗಳು, ದರ್ವೇಶ್ ವೆಲ್‌ಫೇರ್ ಅಸೋಸಿಯೇಷನ್ (ರಿ) ನಂ.18,

ಈದ್ಗಾ ಕಾಂಪ್ಲೆಕ್ಸ್, ಟಿಪಿಎಸ್ ಟ್ಯಾನರಿ ರೋಡ್, ಬೆಂಗಳೂರು-5 ಇವರಿಗೆ ಅನುಮೋದನೆಯನ್ನು ನೀಡಲಾಗಿದೆ. ಆದರೆ ಮೇಲ್ಕಂಡಂತೆ ನೀಡಲಾಗುವ ಗುರುತಿನ ಚೀಟಿಯು ಭಿಕ್ಷಾಟನೆ ನಿರ್ಮೂಲನಾ ಕಾಯಿದೆ ಪ್ರಕಾರ ಧಾರ್ಮಿಕ ಭಿಕ್ಷುಗಳನ್ನು ಗುರುತಿಸುವಿಕೆಗೆ ನೀಡಲಾಗಿದೆ ಹೊರತು ಬೇರೆ ಯಾವುದೇ ಕಾರಣಕ್ಕೆ ಉಪಯೋಗಿಸುವಂತಿಲ್ಲ ಹಾಗೂ ಯಾವುದೇ ಜಾತಿ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಆಧಾರವಾಗಿರುವುದಿಲ್ಲವೆಂಬ ಸ್ಪಷ್ಟೀಕರಣವನ್ನು ಅದೇ ಗುರುತಿನ ಚೀಟಿಯಲ್ಲಿ ನಮೂದಿಸತಕ್ಕದ್ದು. ಗುರುತಿನ ಚೀಟಿಯನ್ನು ಕೇಂದ್ರ ಪರಿಹಾರ ಸಮಿತಿಯ ಅಧಿಕಾರಿಗಳು ದೃಢೀಕರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಸ್.ಮರುಳಸಿದ್ಧಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಲು ಹಾಗೂ ಪ್ರಕಟಿಸಿದ 1000 ಪ್ರತಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಲು ಕೋರಿದೆ.

ಗೆ,

1. ಮಹಾನಿರೀಕ್ಷಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಬೆಂಗಳೂರು.
2. ಪೋಲೀಸ್, ಕಮೀಷನರ್ ಬೆಂಗಳೂರು,
3. ರಾಜ್ಯದ ಎಲ್ಲಾ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್.
4. ಆಯುಕ್ತರು, ಸಮಾಜ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
5. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಆಯುಕ್ತರಿಗೆ,
6. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
7. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್,
8. ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ ಬೆಂಗಳೂರು.(ರಾಜ್ಯದಲ್ಲಿರುವ ಪುರಸಭೆಗಳಿಗೆ ತಮ್ಮ ಕಛೇರಿ ಮೂಲಕ ಈ ಆದೇಶವನ್ನು ರವಾನಿಸುವುದು)
9. ರಾಜ್ಯದ ಎಲ್ಲಾ ತಹಶೀಲ್ದಾರರುಗಳಿಗೆ.
10. ಕಾರ್ಯದರ್ಶಿ, ದರ್ವೇಶ್ ವೆಲ್‌ಫೇರ್ ಅಸೋಸಿಯೇಷನ್ (ರಿ) ನಂ.18, ಈದ್ಗಾ ಕಾಂಪ್ಲೆಕ್ಸ್, ಟಿಪಿಎಸ್.ಎ ಟ್ಯಾನರಿ ರೋಡ್ ಬೆಂಗಳೂರು-5.
11. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಶಾಖಾ ರಕ್ಷಾ ಕಡತ